ವೈಚಾರಿಕತೆಯ, ನಿರ್ಭಯ ನಿಲುವಿನ ಚರ್ಚಾಪಟುವೂ ಆಗಿದ್ದರು. ದೇವರ ಅಸ್ತಿತ್ವ ಕುರಿತು ಎ.ಪಿ.ಎಸ್. ಕಾಲೇಜಿನಲ್ಲಿ ನಡೆದ ಚರ್ಚಾಸ್ಪರ್ಧೆಯಲ್ಲಿ ಸ್ಟೇಜಿನ ಮೇಲೆ ಉರಿಯುತ್ತಿದ್ದ ದೀಪವನ್ನು ದೇವರ ಅವತಾರವೆಂದು ಪ್ರತಿಸ್ಪರ್ಧಿಗಳು ಮತ್ತೆ ಮತ್ತೆ ಹೇಳುತ್ತಿದ್ದುದನ್ನು ಕೇಳಿ ಸಿದ್ಧಲಿಂಗಯ್ಯನವರಿಗೆ ರೇಗಿಹೋಗಿತ್ತು. ತಮ್ಮ ಸರದಿ ಬಂದಾಗ ಸ್ಟೇಜು ಹತ್ತಿದ ಅವರು ಇದ್ದಕ್ಕಿದ್ದಂತೆ ದೀಪ ಉರುಬಿ ಆರಿಸಿ, 'ನಿಮ್ಮ ದೇವರು ಇದ್ದ ಪಕ್ಷದಲ್ಲಿ ನಾನು ಮಾತಾಡುವುದನ್ನು ನಿಲ್ಲಿಸಲಿ' ಎಂದು ವಿರೋಧಿಗಳಿಗೆ ಸವಾಲು ಹಾಕಿದರು. ಇದರಿಂದ ಸಿಟ್ಟಿಗೆದ್ದ ಹುಡುಗರಿಂದ ಗಲಾಟೆ ಶುರುವಾಗಿ, ಹಾಗೂ ಹೀಗೂ ತಣ್ಣಗಾಯಿತು; ಚರ್ಚಾಸ್ಪರ್ಧೆಯಲ್ಲಿ ಈ ವಿಚಾರವಾದಿ ಚರ್ಚಾಪಟುವಿಗೆ ಮೊದಲ ಬಹುಮಾನವೂ ಸಿಕ್ಕಿತು.

ಅಷ್ಟೊತ್ತಿಗಾಗಲೇ ವೈಚಾರಿಕ ಪದ್ಯಗಳನ್ನು ಬರೆಯುತ್ತಿದ್ದ ಸಿದ್ಧಲಿಂಗಯ್ಯ ಕೆಲವು ತೀಕ್ಷ್ಣ ಸಾಲುಗಳನ್ನು ಬರೆದು ಇದು ಕುವೆಂಪು ಪದ್ಯದ ಸಾಲೆಂದು ಹೇಳಿ, ತಮಾಷೆ ಕೂಡ ನೋಡಿದ್ದರು! ಆ ಕಾಲಕ್ಕಾಗಲೇ ಅವರನ್ನು ಮೆಚ್ಚಿ ಬೆಂಬಲಿಸುತ್ತಿದ್ದ ವಿವಿಧ ಜಾತಿಗಳ ಹುಡುಗರೂ, ಕನ್ನಡ ಲೇಖಕರೂ ಇದ್ದರು. 1973ರಲ್ಲಿ ಬಸವಲಿಂಗಪ್ಪನವರು ಶಿವಮೊಗ್ಗದ ಕೆಲವು ಪತ್ರಿಕೆಗಳ ಬೇಜವಾಬ್ದಾರಿ ಬರವಣಿಗೆಯನ್ನು ಟೀಕಿಸುತ್ತಾ, 'ಇಂಥ ಪತ್ರಿಕೆಗಳಲ್ಲಿ ಏನೇನೋ ಬರೆದು ಹೊಟ್ಟೆ ತುಂಬಿಸಿಕೊಳ್ಳುವ ಕನ್ನಡ ಸಾಹಿತಿಗಳು ಬೂಸಾ ಸಾಹಿತಿಗಳು; ಅವರು ಬರೆಯುವ ಕನ್ನಡ ಸಾಹಿತ್ಯವೂ ಬೂಸಾ ಸಾಹಿತ್ಯ' ಎಂದಿದ್ದರು. ಆದರೆ, ಅವರು ಇಡೀ ಕನ್ನಡ ಸಾಹಿತ್ಯವನ್ನೇ 'ಬೂಸಾ' ಎಂದರೆಂದು ಮೇಲುಜಾತಿಗಳ ಅಪಪ್ರಚಾರ ಶುರುವಾಗಿ, ಅವರ ರಾಜೀನಾಮೆಗಾಗಿ ಒತ್ತಾಯ ಎದ್ದಿತು. ಕುವೆಂಪು, ಲಂಕೇಶ್, ಡಿ.ಆರ್. ನಾಗರಾಜ್, ಕಿ.ರಂ. ನಾಗರಾಜ್, ಕಾಳೇಗೌಡ ನಾಗವಾರ ಮೊದಲಾದ ಲೇಖಕರಂತೆ ಸಿದ್ಧಲಿಂಗಯ್ಯನವರೂ ಬಸವಲಿಂಗಪ್ಪನವರ ಪರವಾಗಿ ನಿಂತರು. 3,000 ಹುಡುಗರ ಪ್ರತಿಭಟನಾ ಪ್ರದರ್ಶನವನ್ನೂ ಸಂಘಟಿಸಿದರು. ಈ ನಡುವೆ ಕರ್ನಾಟಕದ ಅನೇಕ ಪ್ರಗತಿಪರರಿಗೆಲ್ಲ ಮೇಷ್ಟರಾಗಿದ್ದ ಜಿ. ರಾಮಕೃಷ್ಣ ನಡೆಸುತ್ತಿದ್ದ 'ಸರ್ಕಲ್ ಫಾರ್ ದಿ ಸ್ಟಡಿ ಆಫ್ ಡಯಲೆಕ್ಟಿಕಲ್ ಮೆಟೀರಿಯಲಿಸಂ' ಕೂಡ ಸಿದ್ಧಲಿಂಗಯ್ಯನವರಿಗೆ ಸೈದ್ಧಾಂತಿಕ ಸ್ಪಷ್ಟನೆ ನೀಡತೊಡಗಿತ್ತು. ಸಿದ್ಧಲಿಂಗಯ್ಯ ಒಂದೆರಡು ವರ್ಷ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸಿಸ್ಟ್) ಪಕ್ಷದ ಸದಸ್ಯರೂ ಆಗಿದ್ದರು.

ಇದೆಲ್ಲದರ ಫಲವಾಗಿ ಕೂಡ 1970ರ ದಶಕದ ಕರ್ನಾಟಕದ ನಕಾಶೆಯಲ್ಲಿ ಹೊಸ ಕವಿ–ನಾಯಕನೊಬ್ಬ ಹಠಾತ್ತನೆ ಮೂಡಿಬಂದಿದ್ದ. ಒಂದು ಕಾಲದ ವೈಚಾರಿಕ ಪ್ರೇರಣೆಗಳು, ಒತ್ತಡಗಳು, ವಿದ್ಯಮಾನಗಳು, ತಿರುವುಗಳು ಹಾಗೂ ವ್ಯಕ್ತಿಯ ಚಡಪಡಿಕೆಗಳು ಹೇಗೆ ಸಾಂಸ್ಕೃತಿಕ ವ್ಯಕ್ತಿತ್ವಗಳನ್ನು ಸೃಷ್ಟಿಸುತ್ತವೆ ಎಂಬುದನ್ನೂ ಈ ವಿದ್ಯಮಾನಗಳು ಹೇಳುತ್ತವೆ.

## ಹೊಲೆಮಾದಿಗರ ಹಾಡು: ಶತಮಾನದ ಕಾವ್ಯ ಸ್ಫೋಟ

ಈ ಹಿನ್ನೆಲೆಯುಳ್ಳ ತರುಣ ಕವಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ಸೇರಿ, ಜ್ಞಾನಭಾರತಿಯ ಮರಗಳಡಿ ತನ್ನ ಸಿಟ್ಟಿನ ಕವಿತೆಗಳನ್ನು ಓದಿದಾಗ ಅಲ್ಲಿದ್ದ ಖ್ಯಾತ ಅಧ್ಯಾಪಕ–ಲೇಖಕರು ಅಚ್ಚರಿಗೊಂಡರು. ಆ ಹೊತ್ತಿಗಾಗಲೇ ಶೂದ್ರ ಶ್ರೀನಿವಾಸ್ ಈ ಕೆಲವು ಪದ್ಯಗಳನ್ನು 'ಶೂದ್ರ' ಪತ್ರಿಕೆಯ ಮೂಲಕ ಕನ್ನಡ ಸಾಹಿತ್ಯ ವಲಯಕ್ಕೆ ಪರಿಚಯಿಸಿದ್ದರು. ಮಾರ್ಕ್ಸ್‌ವಾದದ ಗಂಭೀರ ವಿದ್ಯಾರ್ಥಿಯಾಗಿದ್ದ ಡಿ.ಆರ್. ನಾಗರಾಜ್, ಕಾಲೇಜು ದಿನಗಳಿಂದಲೂ ಸಿದ್ಧಲಿಂಗಯ್ಯನವರ ಕಾವ್ಯದ ಶಕ್ತಿಯನ್ನು ಗುರುತಿಸಿ ಚರ್ಚಿಸುತ್ತಾ ಬಂದಿದ್ದರು. ಕಾಳೇಗೌಡ ನಾಗವಾರ, ಕಿ.ರಂ. ನಾಗರಾಜ್ ಮೊದಲಾದ ಮೇಷ್ಟ್ರುಗಳೆಲ್ಲ ಸೇರಿ ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು' ಸಂಕಲನವನ್ನು ಅಚ್ಚು ಹಾಕಿಸಿದರು. ಮುಂದೆ ನಡೆದದ್ದೆಲ್ಲ ಈಗ ಚರಿತ್ರೆಯ ಭಾಗವಾಗಿದೆ.